**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ದ.ಕ., ಮಂಗಳೂರು.**

| | |
|---|---|
| **ಎಸ್.ಸಿ.ನಂ.55/2016 ಮತ್ತು 161/2021, 80/2023** | |
| ಪ್ರಾ.ಸಾ.07 | ಚಾ.ಸಾ.11 |

| | |
|---|---|
| ಸಾಕ್ಷಿದಾರರ ಹೆಸರು | ವಾರಿಸ್ |
| ತಂದೆಯ ಹೆಸರು | ಯುಸೂಫ್ |
| ಪ್ರಾಯ | 47 ವರ್ಷ |
| ಉದ್ಯೋಗ | ಮಟನ್ ಶಾಪ್ ನಲ್ಲಿ ಕೆಲಸ |
| ವಾಸಸ್ಥಳ | ಕುದ್ರೋಳಿ ಅಂಚೆ, ಕೊಡಿಯಾಲಬೈಲ್, ಮಂಗಳೂರು |
| ದಿನಾಂಕ | **29.01.2024** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

ಮೃತ ಗಣೇಶ ಶೆಟ್ಟಿಯವರು ಈ ಘಟನೆಯ ಒಂದು ವರ್ಷ ಪೂರ್ವದಿಂದ ನನಗೆ ಪರಿಚಿತರಾಗಿರುತ್ತಾರೆ. ನನ್ನ ಧಣಿ ನಾಸೀರ್ ಮತ್ತು ಗಣೇಶ ಶಿವರಾಮ ಶೆಟ್ಟಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಒಂದೇ ಸೆಲ್ ನಲ್ಲಿ ನ್ಯಾಯಾಂಗಬಂಧನದಲ್ಲಿದ್ದರು. ನಾಸೀರ್ ನಂತರ ಜಾಮೀನು ಪಡೆದು ಬಿಡುಗಡೆಯಾಗಿರುತ್ತಾರೆ. ನಾನು ನಾಸೀರ್ ನ ನಿರ್ದೇಶನದಂತೆ ಗಣೇಶ ಶಿವರಾಮ ಶೆಟ್ಟಿಗೆ ಮದ್ಯಾಹ್ನದ ಊಟವನ್ನು ಕಾರಾಗೃಹಕ್ಕೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದೆ. ದಿನಾಂಕ 02.11.2015 ರಂದು ಗಣೇಶ ಶಿವರಾಮ ಶೆಟ್ಟಿಯವರು ಕಾರಾಗೃಹದ ಒಳಗೆ ಕೊಲೆಯಾದ ಬಗ್ಗೆ ನನಗೆ ಮಾಹಿತಿ ಬಂತು.

2. ನಾನು ಎ.ಜೆ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಮೃತರ ದೇಹವನ್ನು ನೋಡಿರುತ್ತೇನೆ. ಮೃತರ ತಲೆ, ಎದೆ ಮತ್ತು ಮುಖಕ್ಕೆ ರಕ್ತಗಾಯಗಳು ಆಗಿದ್ದವು. ಶವದ ಮೇಲೆ ಪಿಂಕ್ ಕಲರ್ ನ ಬರ್ಮುಡ ಇತ್ತು. ನಾನು ಶವಾಗಾರಕ್ಕೆ ಹೋದಾಗ ಅಲ್ಲಿ ನ್ಯಾಯಾಧೀಶರು ಸಹ ಇದ್ದರು. ಅವರು ಶವಪಂಚನಾಮೆ ಮಾಡುವ ಕಾಲಕ್ಕೆ ನನ್ನ ಹೇಳಿಕೆ ಪಡೆದಿರುತ್ತಾರೆ ಮತ್ತು ಸಹಿ ಮಾಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಮೃತ ಗಣೇಶ

ಶಿವರಾಮ ಶೆಟ್ಟಿಯವರ ಶವ ಪಂಚನಾಮೆಯನ್ನು **ನಿಪಿ-12** ಹಾಗೂ ಸಾಕ್ಷಿಯು ಗುರುತಿಸಿಕೊಂಡ ಅವರ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮದ್ಯಾಹ್ನ 03.00 ರಿಂದ ಸುಮಾರು ಸಂಜೆ 05.00 ರಿಂದ 05.30 ರವರೆಗೆ ನಡೆಸಲಾಗಿರುತ್ತದೆ.

3. ನ್ಯಾಯಾಲಯದ ಮುಂದೆ ಹೊಲೆದು ಸೀಲ್ ಮಾಡಲಾದ ಒಂದು ಸ್ವತ್ತನ್ನು ಹಾಜರುಪಡಿಸಿದ್ದು, ಅದನ್ನು ಆರೋಪಿತರು ಮತ್ತು ಅವರ ವಕೀಲರ ಸಮಕ್ಷಮ ತೆರೆಯಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪಿಂಕ್ ಬಣ್ಣದ ಬರ್ಮುಡ ಚಡ್ಡಿಯನ್ನು ಮು.ಮಾ-**26** ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲದಲ್ಲಿ ತೆಗೆಯಲಾದ ಒಂದು ಫೋಟೋವನ್ನು ಹಾಗೂ ಅದಕ್ಕೆ ಸಂಬಂಧಿಸಿದ ಸಿಡಿಯನ್ನು ಒಟ್ಟಾಗಿ **ನಿಪಿ-13** ಎಂದು ಗುರುತಿಸಲಾಯಿತು. ನಿಪಿ-8 ರಲ್ಲಿರುವ ಮೃತರ 6 ಫೋಟೋಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.</u>**

4. ಮೃತ ಗಣೇಶ ಶಿವರಾಮ ಶೆಟ್ಟಿ ನನ್ನ ಸಂಬಂಧಿಕರಲ್ಲ ಮತ್ತು ನನ್ನ ನೆರೆಕೆರೆಯವರು ಅಲ್ಲ. ನನ್ನ ಜಾತಿ ಬಾಂದವರು ಸಹ ಆಗಿರುವುದಿಲ್ಲ. ಮೃತ ಗಣೇಶ ಶಿವರಾಮ ಶೆಟ್ಟಿ ಯಾವ ಪ್ರಕರಣದಲ್ಲಿ ಎಷ್ಟು ದಿನಗಳಿಂದ ಜಿಲ್ಲಾ ಕಾರಾಗೃಹದಲ್ಲಿ ನ್ಯಾಯಾಂಗಬಂಧನದಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ಜಿಲ್ಲಾ ಕಾರಾಗೃಹದ ಯಾವ ಬ್ಲಾಕ್ ನಲ್ಲಿ ಅವರನ್ನು ಇಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ನನಗೆ ಗಣೇಶ ಶಿವರಾಮ ಶೆಟ್ಟಿಗೆ ಊಟ ನೀಡಲು ನಿರ್ದೇಶನ ಇರಲಿಲ್ಲ.

5. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡುವಾಗ ಯಾರು ಊಟ ಕೊಡುವಂತೆ ನನಗೆ ಸೂಚಿಸಿದರು ಎಂದು ಮತ್ತು ನಾನು ಯಾವಾಗಿನಿಂದ ಊಟ ತೆಗೆದುಕೊಂಡು ಹೋಗಿ ಕೊಡುತ್ತಿದ್ದೆ ಎಂದು ಹೇಳಿಲ್ಲ. ನಾನು ತೆಗೆದುಕೊಂಡು ಹೋದ ಊಟವನ್ನು ಜೈಲಿನಲ್ಲಿದ್ದ ಇನ್ನೊಬ್ಬ ಖೈದಿ ಚೋಟು ಎನ್ನುವವನು ನನ್ನಿಂದ ಪಡೆಯುತ್ತಿದ್ದ. ನಾನು ಚೋಟು ಮೂಲಕ ಮೃತ ಗಣೇಶ ಶೆಟ್ಟಿಗೆ ಊಟ ಕೊಟ್ಟಿದ್ದನ್ನು ನ್ಯಾಯಾಧೀಶರ ಮುಂದೆ ಹೇಳಿಲ್ಲ. ಕಾರಾಗೃಹದ ಒಳಗೆ ಹೋಗುವಾಗ ನನ್ನ ಎಲ್ಲ ವಿವರಗಳನ್ನು ಪಡೆದು ಬರವಣಿಗೆ ಮಾಡಿ ನನ್ನ ಸಹಿ ಪಡೆದು, ವೇಳೆ ನಮೂದಿಸಿ ಒಳಗೆ ಬಿಡುತ್ತಿದ್ದರು ಎಂದರೆ ಸರಿ.

6. ನನ್ನ ಧಣಿ ನಾಸೀರ್ ಮತ್ತು ನಾನು ಒಟ್ಟಾಗಿ ಎ.ಜೆ ಆಸ್ಪತ್ರೆಗೆ ಹೋಗಿದ್ದೆವು. ನಾನು ನೋಡಿದಾಗ ಶವದ ಮೇಲೆ ಬರ್ಮುಡ ಹೊರತುಪಡಿಸಿ ಬೇರೆ ಬಟ್ಟೆ ಇರಲಿಲ್ಲ. ನಾನು ಶವದ ಮೇಲೆ ಮುಖಕ್ಕೆ, ಎದೆಗೆ ಮತ್ತು ತಲೆಗೆ ಪೆಟ್ಟಾಗಿದ್ದನ್ನು ಮಾತ್ರ ನೋಡಿರುತ್ತೇನೆ. ನಾನು ಮೃತ ಗಣೇಶ ಶೆಟ್ಟಿಗೆ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿದ್ದಾಗ ಊಟವನ್ನು ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಬರ್ಕೆ ಪೊಲೀಸರು ನನಗೆ ಪರಿಚಿತರಲ್ಲ. ಪೊಲೀಸರು ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರ ಶವದ ಮೇಲೆ ಪಿಂಕ್ ಬಣ್ಣದ ಚಡ್ಡಿಯಿದ್ದ ಬಗ್ಗೆ ನಾನು ನ್ಯಾಯಾಧೀಶರ ಮುಂದೆ ಶವಾಗಾರದಲ್ಲಿ ಹೇಳಿಕೆ ನೀಡಿಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.